ಸ್ಟ್ಯಾಂಡ್ ಮಾಡುತ್ತೇವೆ, ಅದರಲ್ಲಿ ಏನೂ ಅಡ್ಡಿ ಇಲ್ಲ. ಇವರು ಮೊದಲು ಕೊಡುತ್ತೇವೆಂದು ಹೇಳಿದ ಜಾಗವನ್ನು ಕೊಡದೇ ಈಗ ಒಂದು ಎಕರೆಯನ್ನು ಅದು ಹಿಂದಕ್ಕೆ ಬಸ್ ಸ್ಟ್ಯಾಂಡ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ನಮಗೆ ಆ ಗುಡೂರ ಗ್ರಾಮಕ್ಕೆ ಒಂದು ಎಕರೆ ಜಾಗ ಸಾಕಾಗುವುದಿಲ್ಲ. ಇನ್ನು ಐಹೊಳೆ ಅದಕ್ಕೆ ನಾವು ಮಾಡುತ್ತೇವೆ. ಈ ಎರಡು ಜಾಗಕ್ಕೂ ಬಸ್ ಸಂಚಾರವಿದೆ, ನಾವು ಇದನ್ನು ಮಾಡುತ್ತೇವೆ. ಮುಖ್ಯವಾಗಿ ನಮಗೆ ಭೂಮಿ ಬೇಕಾಗಿದೆ,

ಶ್ರೀ ಬಿ.ಬಿ. ಶಿವಪ್ಪ :— ಈಗ ಖಾಸಗಿಯವರು ಒಂದೂವರೆ ಎಕರೆ ಜಾಗವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ, ಆ ಬಸ್ ನಿಲ್ದಾಣದ ಕೆಲಸವನ್ನು ತೆಗೆದುಕೊಳ್ಳಬಹುದಲ್ಲವೆ? ಆ ಜಾಗ ಸಿಕ್ಕರೆ ತೆಗೆದುಕೊಳ್ಳಬಹುದಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಮೊದಲು ಅವರು ಒಂದು ಎಕರೆ 21 ಗುಂಟೆ ಜಾಗವನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ನಾವು ಮುಂದೆ ಅಂಗಡಿಗಳನ್ನು ಹಾಕಿಕೊಳ್ಳುತ್ತೇವೆ, ಹಿಂದೆ ಒಂದು ಎಕರೆ ಜಾಗವನ್ನು ಕೊಡುತ್ತೇವೆ, ನೀವು ಅಲ್ಲಿ ಬಸ್ ನಿಲ್ದಾಣವನ್ನು ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಒಳಗಡೆ ಹೋಗುವುದಕ್ಕಾಗುವುದಿಲ್ಲ, ನಮ್ಮವರು ಅಲ್ಲಿ ಹೋಗಿ ನೋಡಿಕೊಂಡು ಬಂದು ನಮಗೆ ರಿಪೋರ್ಟ್ ಕೊಟ್ಟಿದ್ದಾರೆ. ನಾವು ಮೊದಲು ಕೇಳಿದ ಹಾಗೆ ಒಂದು ಎಕರೆ 21 ಗುಂಟೆ ಭೂಮಿಯನ್ನು ಕೊಟ್ಟರೆ ಅಲ್ಲಿ ಮಾಡಬಹುದು.

ಶ್ರೀ ಬಿ.ಬಿ. ಶಿವಪ್ಪ :— ನಾವು ಈಗಲೇ ಕೊಟ್ಟರೆ ಕೆಲಸ ಪ್ರಾರಂಭ ಮಾಡುತ್ತಿರಾ?

ಶ್ರೀ ಬಿ.ಎನ್. ಬಚ್ಚೇಗೌಡ :— ನಾವು ಇದನ್ನು 1999-2000ನೇ ಇಸ್ವಿಯಲ್ಲಿ ತೆಗೆದುಕೊಂಡು ಮಾಡುತ್ತೇವೆ.

ಪಾಂಡವಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣ.

50(299) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಪಾಂಡವಪುರ ಜಿಲ್ಲೆ ಉಪ ವಿಭಾಗದ ಮುಖ್ಯ ಕೇಂದ್ರವಾಗಿದ್ದು ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಪಾಂಡವಪುರದಲ್ಲಿ ಪುರಸಭೆಯವರು ಬಸ್ ನಿಲ್ದಾಣದ ಸೌಕರ್ಯವನ್ನು ಒದಗಿಸಿರುತ್ತಾರೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೆ, ಪಾಂಡವಪುರ ಉಪವಿಭಾಗದ ಮುಖ್ಯ ಕೇಂದ್ರವಾಗಿದ್ದು ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದರೆ ಪಾಂಡವಪುರದ ಪುರಸಭೆಯವರು ಬಸ್ ನಿಲ್ದಾಣದ ಸೌಲಭ್ಯವನ್ನು ಒದಗಿಸಿರುತ್ತಾರೆ. ಎಂದು ಉತ್ತರದಲ್ಲಿ ಹೇಳಿದ್ದಾರೆ. ಈಗ ನನಗೆ ಏನು ಅನಿಸುತ್ತದೆ ಎಂದರೆ ಬಸ್ ಸ್ಟ್ಯಾಂಡ್ ಎಲ್ಲಿದೆ ಎಂಬುದು ನನಗೇ ಗೊತ್ತಿಲ್ಲ ಎನ್ನುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಅದು ಪುರಸಭೆಯ ಖಾಲಿ ಜಾಗ, ಅಲ್ಲಿ ಬಸ್ ನಿಂತುಕೊಳ್ಳುತ್ತಿದೆ. ಈಗ ನಾನು ಪಾಂಡವಪುರದಲ್ಲಿ ಬಸ್ ನಿಲ್ದಾಣ ಕಾಣೆಯಾಗಿದೆ ಎಂದು ದೂರು ಕೊಡಬೇಕಾಗಿದೆ. ಅದಕ್ಕೆ ಯಾವ ರೀತಿಯಾಗಿ ಬಸ್ ನಿಲ್ದಾಣ ಕಾಣೆಯಾಗಿದೆ ಎಂಬ ಬಗ್ಗೆ ದೂರು ಕೊಡುವುದಕ್ಕೆ ಸಹಾಯಕ್ಕೆ ಬರಬೇಕು. ಅಲ್ಲಿ ಬಸ್ ನಿಲ್ದಾಣ ಇಲ್ಲ, ಈಗ ನಮ್ಮ ಪ್ರಶ್ನೆ ಇರುವಂಥಾದ್ದು ಪಾಂಡವಪುರ ಉಪವಿಭಾಗದ ಮುಖ್ಯ ಕೇಂದ್ರವಾಗಿದೆ. ಅದಕ್ಕೆ ಹೊಸ ಬಸ್ ನಿಲ್ದಾಣ ಮಾಡುವ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಬಸ್‌ನಿಲ್ದಾಣದ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಹಣವನ್ನು ಒದಗಿಸುವ ವಿಚಾರವನ್ನು ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಅಲ್ಲಿ ಪುರಸಭೆಯ ಒಡತನದಲ್ಲಿ ಹಿಂದಿನ ಚಿಕ್ಕ ಬಸ್ ನಿಲ್ದಾಣವಿದೆ. ನ್ಯಾಷನಲೈಜ್ ಬಸ್‌ಗಳು ಬರುತ್ತವೆ, ಸುಮಾರು 85 ಬಸ್‌ಗಳು ಬಂದು ಹೋಗುತ್ತವೆ. ನಮ್ಮ ಎರಡು ಬಸ್‌ಗಳು ಅಲ್ಲಿಂದಲೇ ಪ್ರಾರಂಭವಾಗುತ್ತವೆ. ಅದುದರಿಂದ ನಾವು ಅಲ್ಲಿ ಹೊಸ ಬಸ್‌ನಿಲ್ದಾಣ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಕೃಷಿ ಮಾರ್ಕೆಟಿಂಗ್‌ಗೆ ಸೇರಿರತಕ್ಕಂಥ ಮತ್ತು ಆರೋಗ್ಯ ಇಲಾಖೆಗೆ ಸೇರಿದಂತಹ ಜಾಗವನ್ನು ತಾವು ಕೊಡಿಸುತ್ತೇವೆಂದು ಹೇಳಿದ್ದೀರಿ. ತಾವು ಎರಡು ಎಕರೆ ಜಾಗವನ್ನು ಕೊಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಅಲ್ಲಿ ಮನೆಗಳು ಇವೆ. ಆ ಮನೆಗಳವರು ಬೇರೆ ಕಡೆಗೆ ಹೋಗುವಂತಹ ವ್ಯವಸ್ಥೆಯಾಗಬೇಕು. ನಂತರ ನಾವು ಆ ಜಾಗವನ್ನು ನಮಗೆ ಕೊಟ್ಟರೆ ನಾವು ಅಲ್ಲಿ ಬಸ್ ನಿಲ್ದಾಣದ ಕೆಲಸವನ್ನು ಈ ವರ್ಷದಲ್ಲೇ ತೆಗೆದುಕೊಳ್ಳುತ್ತೇವೆ. ತಾವು ಮಾತನಾಡಿ ಆ ಜಾಗವನ್ನು ನಮಗೆ ಕೊಡಿಸಿದರೆ ಮಾಡುತ್ತೇವೆ, ಅದರಲ್ಲಿ ಏನೂ ಅಡ್ಡಿ ಇಲ್ಲ. ಈಗಾಗಲೇ ಜಿಲ್ಲಾಧಿಕಾರಿಯವರೂ ಸಹ ಕರೆಸ್ಪಾಂಡೆನ್ಸ್ ಮಾಡಿ ನಮ್ಮನ್ನು ಕೇಳಿದ್ದಾರೆ. ತಾವು ಆ ಮನೆಗಳನ್ನು ನೀವೇ ಕಟ್ಟಿಸಿಕೊಡಿ ಎಂದು ಹೇಳಿದ್ದೀರೆಂದು ಸುದ್ದಿ ಇದೆ. ನಾವು ಆ ರೀತಿಯಾಗಿ ಮಾಡುವುದಾಗುವುದಿಲ್ಲ. ಆ ಮನೆಗಳನ್ನು ತೆರವು ಮಾಡಿ

ಬೇರೆ ಮನೆಗಳನ್ನು ಕಟ್ಟಿಸಿಕೊಡಿ ಎಂದು ಹೇಳಿದರೆ ಲಕ್ಷಾಂತರ ರೂಪಾಯಿಗಳು ಬೇಕಾಗುತ್ತದೆ. ಆ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುವುದಿಲ್ಲ. ತಾವು ನಮಗೆ ಭೂಮಿಯನ್ನು ಪುಕ್ಕಟೆಯಾಗಿ ಕೊಡಿಸಿ, ನಿಮಗೆ ನಾವು ಬಸ್ ನಿಲ್ದಾಣವನ್ನು ಕಟ್ಟಿಸಿ ಕೊಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ತಾವು ಲ್ಯಾಂಡ್ ವ್ಯಾಲ್ಯೂಯೇಷನ್ ಕೊಡುವಂತಹ ಆಲೋಚನೆಯನ್ನು ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಲ್ಯಾಂಡ್ ವ್ಯಾಲ್ಯುಯೇಷನ್ ಕೊಡುತ್ತೇವೆ, ತಾವು ಕಡಿಮೆ ದರದಲ್ಲಿ ಕೊಡಿಸಿದರೆ ನಾವು ಕೊಡುತ್ತೇವೆ. ತಾವು ಉಚಿತವಾಗಿ ಕೊಡಿಸಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ಆಯಿತು, ನಾವು ನೀವು ಮಾತನಾಡಿ ಮಾಡೋಣ.

ಗುಬ್ಬಿ ಕ್ಷೇತ್ರದ ಕೆ.ಜಿ.ಟೆಂಪಲ್, ಮಾವಿನಹಳ್ಳಿ, ಕಲ್ಲೂರು ಕ್ರಾಸ್ ಮತ್ತು ನಿಟ್ಟೂರು ಗ್ರಾಮಗಳಲ್ಲಿ ಉಪ ಮಾರುಕಟ್ಟೆಯ ಮಂಜೂರಾತಿ.

54(35) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಬ್ಬಿ ಕ್ಷೇತ್ರದ ಕೆ.ಜಿ. ಟೆಂಪಲ್, ಮಾವಿನಹಳ್ಳಿ, ಕಲ್ಲೂರು ಕ್ರಾಸ್ ಮತ್ತು ನಿಟ್ಟೂರ್ ಗ್ರಾಮಗಳಲ್ಲಿ, ಉಪ ಗ್ರಾಮಗಳಲ್ಲಿ ಉಪ ಮಾರುಕಟ್ಟೆಗಳನ್ನು ಮಂಜೂರು ಮಾಡಬೇಕೆಂದು 3-4 ವರ್ಷಗಳಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) ಕೆ.ಜಿ. ಟೆಂಪಲ್ ಮತ್ತು ನಿಟ್ಟೂರುಗಳಲ್ಲಿ ಈಗಾಗಲೇ ಉಪ ಮಾರುಕಟ್ಟೆಗಳನ್ನು ಸ್ಥಾಪನೆ ಮಾಡಲಾಗಿದೆ. ಮತ್ತು ಅಭಿವೃದ್ಧಿಪಡಿಸಲಾಗುತ್ತಿದೆ. ಕಲ್ಲೂರು ಕ್ರಾಸ್‌ನಲ್ಲಿ ಗ್ರಾಮೀಣ ಮಾರುಕಟ್ಟೆಯನ್ನು (ಸಂತೆ) ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗಿದೆ. ಮಾವಿನಹಳ್ಳಿ ಗ್ರಾಮದಲ್ಲಿ ಉಪ ಮಾರುಕಟ್ಟೆ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿರುವುದಿಲ್ಲ.

ಆ) ಮಾವಿನಹಳ್ಳಿ ಗ್ರಾಮದಲ್ಲಿ ಉಪ ಮಾರುಕಟ್ಟೆ ಸ್ಥಾಪಿಸಲು ಪ್ರಸ್ತಾಪ ಬಂದಲ್ಲಿ ಪರಿಶೀಲಿಸಲಾಗುವುದು.

ಶ್ರೀ ಜಿ.ಎಸ್. ಶಿವನಂಜಪ್ಪ :— ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರದಲ್ಲಿ ಕೆ.ಜಿ. ಟೆಂಪಲ್ ಮತ್ತು ನಿಟ್ಟೂರುಗಳಲ್ಲಿ ಈಗಾಗಲೇ ಉಪ ಮಾರುಕಟ್ಟೆಗಳನ್ನು ಸ್ಥಾಪನೆ